## 2018 ಕ.ತೀ.ವ. 237

**(ಧಾರವಾಡ ಪೀಠ)**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ**

**ರುದ್ರಪ್ಪ -ವಿರುದ್ಧ- ಮಂಜುನಾಥ್ ಹಾಗೂ ಇನ್ನೊಬ್ಬರು***

**ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮದ 19(4) ನೇ ಪ್ರಕರಣದಡಿಯಲ್ಲಿ ಅರ್ಜಿ.**

**ದಂಡ ಪ್ರಕ್ರಿಯಾ ಸಂಹಿತೆಯ 127ನೇ ಪ್ರಕರಣದಡಿಯಲ್ಲಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿ.**

**ದಂಡ ಪ್ರಕ್ರಿಯಾ ಸಂಹಿತೆ 125 ನೇ ಪ್ರಕರಣದಡಿಯಲ್ಲಿ ಪರಿಹಾರವನ್ನು ನೀಡಲು ಜಾರಜ ಶಿಶು ಮತ್ತು ಔರಸ ಮಗು ಎಂಬ ಭೇದವಿಲ್ಲ. ಈ ಕಾರಣದಿಂದ ಅಧಿವಿಚಾರಣಾ ನ್ಯಾಯಾಲಯವು ನೀಡಿದ ಆದೇಶವನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ದಂಡ ಸಹಿತ ವಜಾಗೊಳಿಸಿದೆ.**

ಅರ್ಜಿದಾರರ ಪರ : ಶ್ರೀ ಪಿ.ಜಿ. ಚಿಕ್ಕನರಗುಂದ್ – ವಕೀಲರು.
1 ಮತ್ತು 2ನೇ ಪ್ರತ್ಯರ್ಜಿದಾರರ ಪರ : ಶ್ರೀ ಎಸ್.ಎಸ್. ಹಟ್ಟಿಕಟಗಿ –ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ಕ್ರಿಮಿನಲ್ ಸಂಕೀರ್ಣ ಸಂ.7/2012ರಲ್ಲಿ ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಧಾರವಾಡ ಇವರಿಂದ ನೀಡಲಾದ ತೀರ್ಪು ಮತ್ತು ಆದೇಶದ

*ಆರ್.ಪಿ.ಎಫ್.ಸಿ. ಸಂಖ್ಯೆ:100187/2014, ದಿನಾಂಕ: 6ನೇ ಜನವರಿ, 2017.

ವಿರುದ್ಧ ಈ ಅರ್ಜಿಯನ್ನು ನಿರ್ದೇಶಿಸಲಾಗಿದೆ. ದಂಡ ಪ್ರಕ್ರಿಯಾ ಸಂಹಿತೆ, 1973ರ (ಸಂಕ್ಷಿಪ್ತವಾಗಿ ಸಿಆರ್‌ಪಿಸಿ ಎಂದು ಉಲ್ಲೇಖಿಸಿದ) 127ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರನಿಂದ ದಾಖಲು ಮಾಡಿದ ಅರ್ಜಿಯನ್ನು, ದಂಡ ಸಹಿತ ವಜಾಗೊಳಿಸಲಾಗಿತ್ತು.

2. ಈ ಸಂಗತಿಗಳನ್ನು ಸಂಕ್ಷಿಪ್ತವಾಗಿ ಮುಂದಿನಂತೆ ಹೇಳಲಾಗಿದೆ:

ಎದುರುದಾರರ ತಾಯಿಯಾದ ಶ್ರೀಮತಿ ವಿಜಯ, ಕ್ರಿಮಿನಲ್ ಸಂಕೀರ್ಣ ಸಂ.283/2002 ರಲ್ಲಿ ಜೆಎಂಎಫ್‌ಸಿ ನ್ಯಾಯಾಲಯ, ಧಾರವಾಡ ಇದರ ಮುಂದೆ ಜೀವನಾಂಶಕ್ಕಾಗಿ ಅರ್ಜಿಯನ್ನು ದಾಖಲು ಮಾಡಿದ್ದರೆಂದು ವಾದಿಸುತ್ತಾ ಕ್ರಿಮಿನಲ್ ಸಂಕೀರ್ಣ ಸಂ.283/2002 ದಿನಾಂಕ 24.12.2008 ರಲ್ಲಿ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಡಿದ ಆದೇಶವನ್ನು ಮಾರ್ಪಾಡು ಮಾಡುವುದಕ್ಕಾಗಿ ಕೌಟುಂಬಿಕ ನ್ಯಾಯಾಲಯದ ಮುಂದೆ ಸಿಆರ್.ಪಿಸಿಯ 127ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರನು ಅರ್ಜಿಯನ್ನು ದಾಖಲು ಮಾಡಿದ್ದನು ಮತ್ತು ಅದನ್ನು ಪುರಸ್ಕರಿಸಲಾಗಿದೆ. ಪ್ರತಿ ಎದುರುದಾರರಿಗೆ 1,000/– ರೂಪಾಯಿಗಳ ಜೀವನಾಂಶವನ್ನು ಪಾವತಿಸುವುದಕ್ಕೆ ಅರ್ಜಿದಾರನಿಗೆ ನಿರ್ದೇಶಿಸಲಾಗಿತ್ತು. ಎದುರುದಾರರ ಪೋಷಕಿ/ಸಹಜ ತಾಯಿ ಶ್ರೀಮತಿ ವಿಜಯ, ಲಕಮಾನಹಳ್ಳಿ ಗ್ರಾಮದ ಸರ್ವೇ ನಂ.65, ಪ್ಲಾಟ್ ಸಂ.49ಬಿ ನಲ್ಲಿರುವ ಕಟ್ಟಡದೊಂದಿಗೆ ಅಭಿವೃದ್ಧಿಪಡಿಸಲಾದ ಕೃಷಿಯೇತರ ನಿವೇಶನವನ್ನು ಸ್ವಾಧೀನಪಡಿಸಿಕೊಂಡಿದ್ದಾಳೆ ಮತ್ತು ಸದರಿ ಸ್ವತ್ತು 2,50,000/– ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯವಾಗಿದ್ದು, ಅದರಿಂದ ಆಕೆಯು ಬಾಡಿಗೆ ಆದಾಯವನ್ನು ಪಡೆದುಕೊಳ್ಳುತ್ತಿದ್ದು, ಹಾಗೆಯೇ ಆಕೆಯೇ ಉಭಯ ಅಪ್ರಾಪ್ತ ಎದುರುದಾರರನ್ನು ಪೋಷಿಸುವುದಕ್ಕೆ ಸಮರ್ಥಳಾಗಿದ್ದಾಳೆಯೆಂದು ಹೇಳಲಾಗಿತ್ತು. ಈ ಸ್ವತ್ತಿನ ಸ್ವಾಧೀನವನ್ನು ಕ್ರಿಮಿನಲ್ ಸಂಕೀರ್ಣ ಸಂ.283/2012 ರಲ್ಲಿ ಪ್ರಶ್ನಿತ ಆದೇಶವನ್ನು ಮಾಡಿದ ತರುವಾಯ ಮಾಡಿಕೊಳ್ಳಲಾಗಿದೆ ಮತ್ತು ಬದಲಾದ ಸಂದರ್ಭಗಳಲ್ಲಿ ಕ್ರಿಮಿನಲ್ ಸಂಕೀರ್ಣ ಸಂ.283/2012ರಲ್ಲಿ ಮಾಡಿದ ಆದೇಶ ದಿನಾಂಕ 24.12.2008ನ್ನು ಮಾರ್ಪಾಡಿಸುವುದಕ್ಕಾಗಿ ಈ ಪ್ರಕರಣ ಹಸ್ತಕ್ಷೇಪವನ್ನು

ಕೋರಲಾಗಿತ್ತು. ತಮ್ಮ ನ್ಯಾಯವಾದಿಯ ಮೂಲಕ ಹಾಜರಾದ ಎದುರುದಾರರು, ಅರ್ಜಿಯ ದೃಢೋಕ್ತಿಗಳನ್ನು ಅಲ್ಲಗೆಳೆದು ತಮ್ಮ ಆಕ್ಷೇಪಣಾ ಹೇಳಿಕೆಯನ್ನು ದಾಖಲು ಮಾಡಿದ್ದರು. ದಾಖಲೆ ಮೇಲಿನ ಸಾಕ್ಷ್ಯವನ್ನು ವಿಶ್ಲೇಷಿಸಿದ ತರುವಾಯ ಕೌಟುಂಬಿಕ ನ್ಯಾಯಾಲಯ, ಈ ಅರ್ಜಿಯನ್ನು ವೆಚ್ಚಗಳೊಂದಿಗೆ ವಜಾಗೊಳಿಸಿತ್ತು. ಅದರಿಂದ ಬಾಧಿತನಾದ ಅರ್ಜಿದಾರನು ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ.

3. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಅಹವಾಲಗಳನ್ನು ಆಲಿಸಲಾಗಿದೆ ಮತ್ತು ದಾಖಲೆ ಮೇಲಿನ ಸಾಮಗ್ರಿಯನ್ನು ಪರಿಶೀಲಿಸಲಾಗಿದೆ.

4. ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಕೌಟುಂಬಿಕ ನ್ಯಾಯಾಲಯದ ಮುಂದೆ ಅರ್ಜಿದಾರನು ಒತ್ತಿ ಹೇಳಿದ ಕಾರಣಗಳನ್ನು ಪುನರುಚ್ಚರಿಸಿದ್ದು, ಎದುರುದಾರರು, ಜಾರಜ ಶಿಶುಗಳಾಗಿದ್ದಾರೆ ಮತ್ತು ಹಾಗೆಯೇ ಅವರು ಜೀವನಾಂಶಕ್ಕೆ ಹಕ್ಕುಳ್ಳವರಾಗಿರುವುದಿಲ್ಲವೆಂದು ವಾದಿಸಿದ್ದಾರೆ. ಮಕ್ಕಳ ತಾಯಿಯು, ಆರ್ಥಿಕವಾಗಿ ಸುಸ್ಥಿತಿಯನ್ನು ಹೊಂದಿದ ಎದುರುದಾರರನ್ನು ಪೋಷಿಸುವುದಕ್ಕೆ ಶಕ್ತರಾಗಿದ್ದು, ಎದುರುದಾರರ ಜೀವನಾಂಶಕ್ಕಾಗಿ ಜೀವನಾಂಶ ಮೊತ್ತವನ್ನು ಪಾವತಿಸುವುದಕ್ಕೆ ಅರ್ಜಿದಾರನು ಹೊಣೆಗಾರನಾಗುವಂಥ ಸ್ಥಿತಿಯಿಲ್ಲವೆಂದು ಮುಂದುವರೆದು ವಾದಿಸಿದ್ದಾರೆ. ಹೀಗಾಗಿ, ಮಾನ್ಯ ನ್ಯಾಯವಾದಿಯು ಈ ಅರ್ಜಿಯನ್ನು ಅಂಗೀಕರಿಸುವಂತೆ, ಪ್ರಶ್ನಿತ ತೀರ್ಮ ಮತ್ತು ಆದೇಶವನ್ನು ರದ್ದುಪಡಿಸುವಂತೆ ಕೋರಿದ್ದಾರೆ.

5. ಇದಕ್ಕೆ ವಿರುದ್ಧವಾಗಿ, ಎದುರುದಾರರ ಪರವಾಗಿ ಹಾಜರಾದ ಮಾನ್ಯ ವಾದಿಯು, ಎದುರುದಾರರ ತಂದೆಯಾದ ಅರ್ಜಿದಾರನು, ತನ್ನ ಮಕ್ಕಳ ಜೀವನಾಂಶದ ಹೊಣೆಯಿಂದ ತಪ್ಪಿಸಿಕೊಳ್ಳಲಾಗದೆಂದು ಪ್ರಶ್ನಿತ ತೀರ್ಪಿಗೆ ಪೂರಕವಾಗಿ ವಾದಿಸಿದ್ದಾರೆ. ಜೀವನಾಂಶದ ಸಂದಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿ, ಆದೇಶಿಸಿ, ಅರ್ಜಿದಾರನು, ಎದುರುದಾರರನ್ನು, ಜಾರಜ ಶಿಶುಗಳೆಂದು ದೃಢೋಕ್ತಿಗಳನ್ನು ಮಾಡಲಾಗದು. ಸಂದಾಯ ಮಾಡುವ ಹೊಣೆಯಿಂದ ತಪ್ಪಿಸಿಕೊಳ್ಳುವ ಅರ್ಜಿದಾರನ

ವರ್ತನೆಯು ಎದ್ದು ಕಾಣುತ್ತದೆ. ಕ್ರಿಮಿನಲ್ ಸಂಕೀರ್ಣ ಸಂ.283/2002 ರಲ್ಲಿ ಕೌಟುಂಬಿಕ ನ್ಯಾಯಾಲಯ ನೀಡಿದ ಜೀವನಾಂಶ ಮೊತ್ತ, ಪ್ರತಿಯೊಬ್ಬ ಎದುರುದಾರರಿಗೆ ನೀಡಿದ 1,000/– ರೂಪಾಯಿಗಳ ಮೊತ್ತ ಅತ್ಯಲ್ಪವಾಗಿದೆ. ಎದುರುದಾರರ ತಾಯಿಯ ಆರ್ಥಿಕ ಸ್ಥಾನಮಾನವನ್ನು ಗಣನೆಗೆ ತೆಗೆದುಕೊಳ್ಳದೇ, ಆಹಾರ, ಆಶ್ರಯ, ಬಟ್ಟೆ ಮತ್ತು ಶಿಕ್ಷಣ ಇತ್ಯಾದಿ ಹಾಗೆಯೇ ಮಕ್ಕಳ ಮೂಲಭೂತ ಅಗತ್ಯಗಳನ್ನು ನೀಡುವ ಜೀವನಾಂಶಕ್ಕೆ ತಂದೆಯು ಹೊಣೆಯು ಸಹಾ ಸಮನಾಗಿರುತ್ತದೆ. ದಿನಾಂಕ 24.12.2008ರಂದು ಕ್ರಿಮಿನಲ್ ಸಂಕೀರ್ಣ ಸಂಖ್ಯೆ 283/2002ರಲ್ಲಿ ಹೊರಡಿಸಿದ ಆದೇಶದ ರದ್ಧತಿ/ಮಾರ್ಪಾಟು ಮಾಡುವುದಕ್ಕಾಗಿ ಯಾವುದೇ ಉತ್ತಮ ಆಧಾರವನ್ನು ಒದಗಿಸಿರುವುದಿಲ್ಲ. ಕೌಟುಂಬಿಕ ನ್ಯಾಯಾಲಯ, ವೆಚ್ಚಗಳೊಂದಿಗೆ ಅರ್ಜಿಯನ್ನು ವಜಾಗೊಳಿಸಿರುವುದು ನ್ಯಾಯಸಮ್ಮತವಾಗಿದೆ. ಅದಕ್ಕನುಸಾರವಾಗಿ, ಅವರು ಈ ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾರೆ.

6. ಪಕ್ಷಕಾರರ ಪರಸ್ಪರ ವಾದಗಳನ್ನು ಆಲಿಸಲಾಗಿದೆ ಮತ್ತು ದಾಖಲೆ ಮೇಲಿನ ಸಾಮಗ್ರಿಯನ್ನು ಪರಿಶೀಲಿಸಲಾಗಿದ್ದು, ಕ್ರಿಮಿನಲ್ ಸಂಕೀರ್ಣ ಸಂ.283/2002 ರಲ್ಲಿ ಕೌಟುಂಬಿಕ ನ್ಯಾಯಾಲಯ, ಪ್ರತಿಯೊಬ್ಬ ಅಪ್ರಾಪ್ತ ಎದುರುದಾರರಿಗೆ 1,000/ – ರೂಪಾಯಿಗಳಂತೆ ಜೀವನಾಂಶವನ್ನು ಮಾಸಿಕವಾಗಿ ಪಾವತಿಸಲು ಅರ್ಜಿದಾರನಿಗೆ ನಿರ್ದೇಶಿಸಲಾಗಿದೆಯೆಂಬುದು ಕಂಡು ಬರುತ್ತದೆ. ಅರ್ಜಿದಾರನು, ಜೀವನಾಂಶ ಸಂದಾಯವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಕೌಟುಂಬಿಕ ನ್ಯಾಯಾಲಯದ ಮುಂದೆ ವ್ಯವಹರಣೆಗಳನ್ನು ಲಂಬಿಸುತ್ತಿದ್ದಾನೆಂಬುದು ದಾಖಲೆ ಮೇಲಿನ ಸಾಮಗ್ರಿಯಿಂದ ಕಂಡು ಬರುತ್ತದೆ. 6 ವರ್ಷಗಳಿಗಿಂತ ಹೆಚ್ಚು ಕಾಲ ನಡೆದ ವ್ಯವಹರಣೆಗಳ ತರುವಾಯ, ನ್ಯಾಯ ನಿರ್ಣಯ ಮಾಡಲಾಗಿದ್ದು, ಎದುರುದಾರರಿಗೆ ತಲಾ 1,000/– ರೂಪಾಯಿಗಳ ಜೀವನಾಂಶವನ್ನು ಸಂದಾಯ ಮಾಡುವಂತೆ ಅರ್ಜಿದಾರನಿಗೆ ನಿರ್ದೇಶಿಸಿ, ಕ್ರಿಮಿನಲ್ ಸಂಕೀರ್ಣ ಸಂ.283/2002 ರಲ್ಲಿ ಕೌಟುಂಬಿಕ ನ್ಯಾಯಾಲಯ ಆದೇಶ ಮಾಡಿದೆ. ಅರ್ಜಿದಾರನು, ಎದುರುದಾರರು, ಜಾರಜ ಶಿಶುಗಳಾಗಿದ್ದಾರೆಯೆಂದು ವಾದಿಸಿದ್ದಾರೆ. ಜೀವನಾಂಶಕ್ಕಾಗಿ ಜಾರುಜ ಶಿಶು ಹಕ್ಕು ಹೊಂದಿರುವಿಕೆಯ ಪ್ರಶ್ನೆಯನ್ನು ಸಾಕ್ಷ್ಯ ಅಧಿನಿಯಮದ 112ನೇ ಪ್ರಕರಣವನ್ನು ಓದಿಕೊಂಡು ದಂಡ ಪ್ರಕ್ರಿಯಾ

ಸಂಹಿತೆಯ 125ನೇ ಪ್ರಕರಣದ ಉಲ್ಲೇಖದೊಂದಿಗೆ ಪರೀಕ್ಷಿಸಬಹುದಾಗಿದೆ. ಉದ್ದೇಶಿಸಲಾದ ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣ (1) ಸಾಕಷ್ಟು ಸಂಪಾದನೆಯಿರುವ ಯಾರೇ ವ್ಯಕ್ತಿಯು; (ಎ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥಳಾದ ತನ್ನ ಹೆಂಡತಿಯನ್ನು ಅಥವಾ (ಬಿ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥವಾದ ತನ್ನ ವಿಧಿ ಸಮ್ಮತ ಅಥವಾ ವಿಧಿಸಮ್ಮತವಲ್ಲದ ವಿವಾಹಿತ ಅಥವಾ ಅವಿವಾಹಿತ, ಅಪ್ರಾಪ್ತ ವಯಸ್ಕ ಮಗುವನ್ನು; ಅಥವಾ (ಸಿ) xxxx (ಡಿ) xxxx ನಿರ್ಲಕ್ಷ್ಯ ಮಾಡಿದರೆ ಅಥವಾ ಸಂರಕ್ಷಿಸಲು ತಿರಸ್ಕರಿಸಿದಲ್ಲಿ, ಅದೇ ರುಜುವಾತಿನ ಮೇಲೆ, ಅಂಥ ವ್ಯಕ್ತಿಗಳ ಜೀವನಾಂಶಕ್ಕಾಗಿ ಮಾಸಿಕ ಭತ್ಯೆಗಳಿಗೆ ಆದೇಶಿಸಬಹುದಾಗಿದೆ.

7. ತನ್ನ ಮಕ್ಕಳನ್ನು ನಿರ್ವಹಣೆ ಮಾಡುವುದು ತಂದೆಯ ಕಾನೂನುಬದ್ಧ ನೈತಿಕ ಮತ್ತು ಸಾಮಾಜಿಕ ಹೊಣೆಯಾಗಿದೆ. ಅಂಥ ಹೊಣೆಯನ್ನು ಮಕ್ಕಳ ತಂದೆಯಿಂದ ಯಾವುದೇ ಜೀವನಾಂಶ ಅಥವಾ ಸಹಾಯ/ನೆರವನ್ನು ಪಡೆದುಕೊಳ್ಳದೇ ಸ್ವತಂತ್ರವಾಗಿ ಅಥವಾ ಪ್ರತ್ಯೇಕವಾಗಿ ಮಕ್ಕಳ ಪಾಲನೆ ತೆಗೆದುಕೊಳ್ಳಲು ಮಕ್ಕಳ ತಾಯಿಯ ಮೇಲೆ ಜವಾಬ್ದಾರಿಯನ್ನು ವರ್ಗಾಯಿಸಲಾಗದು ಅಥವಾ ಹೊರಿಸಲಾಗದು. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣವು, ದುರ್ಬಲ ವರ್ಗಗಳಾದ ಮಹಿಳೆ, ಮಕ್ಕಳು ಮತ್ತು ವಯಸ್ಸಾದ ಪೋಷಕರಿಗೆ ಕ್ಷಿಪ್ರವಾಗಿ ಹಾಗೂ ಶೀಘ್ರವಾಗಿ ಪರಿಹಾರ ನೀಡುವುದಕ್ಕಾಗಿ ಅಲೆಮಾರಿ ಜೀವನ ಮತ್ತು ನಿರಾಶ್ರಿತತೆಯನ್ನು ತಡೆಗಟ್ಟಲು ನೀಡಿರುವ ನಿರ್ದೇಶನಗಳು ಸುಸ್ಥಾಪಿತವಾದ ಕಾನೂನು ಸ್ಥಿತಿಯಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಅಡಿಯಲ್ಲಿ ಸಂಕ್ಷಿಪ್ತ ವ್ಯವಹರಣೆಗಳಲ್ಲಿ, ಪಕ್ಷಕಾರರ ಹಕ್ಕುಗಳನ್ನು, ತೀರ್ಮಾನಿಸಲಾಗದು. ಅಲೆಮಾರಿ ಜೀವನ ಮತ್ತು ನಿರಾಶ್ರಿತತೆಯನ್ನು ತಡೆಗಟ್ಟಲು ಜೀವನಾಂಶ ನೀಡುವ ಉದ್ದೇಶ ಮಾತ್ರವಾಗಿದೆ. ಅಂಥ ಸಂದರ್ಭಗಳಲ್ಲಿ, ಅರ್ಜಿದಾರನು, ತನ್ನ ಸ್ವಂತ ಮಕ್ಕಳನ್ನು ಜಾರಜ ಮಕ್ಕಳೆಂದು ಹಣೆಪಟ್ಟಕಟ್ಟಿ ಜೀವನಾಂಶ ಸಂದಾಯ ಮಾಡುವ ಹೊಣೆಯಿಂದ ತಪ್ಪಿಸಿಕೊಳ್ಳಲಾಗದು, ಅದು, ಅವರ ಭವಿಷ್ಯತ್ತಿನ ಜೀವನದ ಮೇಲೆ ಪ್ರತಿಕೂಲ ಪರಿಣಾಮವಾಗುವುದು. ಮಗು ಮಗುವೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದ ಅಡಿಯಲ್ಲಿ

ಜೀವನಾಂಶ ನೀಡುವುದಕ್ಕೆ ಜಾರಜ ಮಗು ಮತ್ತು ಕಾನೂನು ಸಮ್ಮತ ಮಗು ನಡುವೆ ತಾರತಮ್ಯ ಮಾಡಲಾಗದು. ನ್ಯಾಯ ಕೋರಿ, ಈ ನ್ಯಾಯಾಲಯದ ಬಾಗಿಲು ತಟ್ಟಿದ ಅಪ್ರಾಪ್ತ ಮಕ್ಕಳ ಹಕ್ಕುಗಳು ಮತ್ತು ಹಿತಾಸಕ್ತಿಯನ್ನು ರಕ್ಷಿಸುವುದು ನ್ಯಾಯಾಲಯಗಳ ಕರ್ತವ್ಯವಾಗಿದೆ. ಈ ಮುಖ್ಯ ಸಂಗತಿಗಳನ್ನು ಎದುರುದಾರರಿಗೆ ಜೀವನಾಂಶ ಸಂದಾಯದ ಐತೀರ್ಪಿನಲ್ಲಿ ಅರ್ಜಿದಾರನ ವಾದವನ್ನು ರದ್ದುಪಡಿಸುವಾಗ ಕೌಟುಂಬಿಕ ನ್ಯಾಯಾಲಯ ಸರಿಯಾಗಿಯೇ ವಿವೇಚಿಸಿದೆ.

8. ಎದುರುದಾರರಿಗೆ ತಲಾ 1,000/– ರೂಪಾಯಿಗಳಂತೆ ಕೌಟುಂಬಿಕ ನ್ಯಾಯಾಲಯ ನೀಡಿದ ಜೀವನಾಂಶ ಮೊತ್ತವು ಜೀವನವೆಚ್ಚ ಬೆಲೆ ಏರಿಕೆ ಇತ್ಯಾದಿಯ ಮೊತ್ತವನ್ನು ಪರಿಗಣಿಸಿದಲ್ಲಿ ಅತ್ಯಲ್ಪವಾಗಿದೆಯೆಂದು ತಿಳಿಯಬಲ್ಲದ್ದಾಗಿದೆ. ಯಾವುದೇ ಸಂದರ್ಭಗಳ ಮೇರೆಗೆ ಅಪ್ರಾಪ್ತ ಮಕ್ಕಳಿಗೆ ನೀಡಿದ 1,000/– ರೂಪಾಯಿಗಳ ಜೀವನಾಂಶ ಮೊತ್ತ, ಅತಿಯಾಗಿದೆಯೆಂದು ಅಥವಾ ಮಿತಿಮೀರಿದೆಯೆಂದು ಅರ್ಥೈಸಲಾಗದು. ಒಟ್ಟಾರೆ ಸನ್ನಿವೇಶಗಳಲ್ಲಿ, ಪ್ರಶ್ನಿತ ತೀರ್ಪು ಮತ್ತು ಆದೇಶವು ನ್ಯಾಯಸಮ್ಮತವಾಗಿದೆ ಮತ್ತು ಯಾವುದೇ ದೋಷ ಕಂಡು ಬರುವುದಿಲ್ಲ. ಸರಿಯಾದ ತೀರ್ಪು ಮತ್ತು ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಕ್ಕೆ ಅರ್ಜಿದಾರನು ಯಾವುದೇ ಯುಕ್ತ ಕಾರಣವನ್ನು ಮಂಡಿಸಿರುವುದಿಲ್ಲ.

ಅರ್ಜಿಯನ್ನು ವೆಚ್ಚಗಳೊಂದಿಗೆ ವಜಾಗೊಳಿಸಿದೆ.

---